# ಬೆಟ್ಟದ ಜೀವ ಕಾದಂಬರಿಯಲ್ಲಿ ಭೂಮಿ ಮತ್ತು ಮನುಷ್ಯ ಸಂಬಂಧ

**ಮಣೆಗಾರ ಲಕ್ಷ್ಮಣ**
ಸಂಶೋಧನಾರ್ಥಿ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ. ವಿದ್ಯಾರಣ್ಯ.
lakshmana.manegar@gmil.com.

ಕನ್ನಡ ಸಾಹಿತ್ಯದಲ್ಲಿ ಕಾದಂಬರಿಗಳಿಗೆ ಸುಮಾರು ವರ್ಷಗಳ ಇತಿಹಾಸವಿದೆ. ಸ್ವಾತಂತ್ಯ ಪೂರ್ವ ಮತ್ತು ಸಾತಂತ್ರ್ಯೋತ್ತರ ಹಂತಗಳಲ್ಲಿ ಕಾದಂಬರಿಗಳು ಸಮೃದ್ಧವಾಗಿ ಬೆಳೆದು ಬಂದಿವೆ. ಮಾನವ ಸಂಸ್ಕೃತಿಯನ್ನು ಶೋಧಿಸುವ ಅನೇಕ ಕಾದಂಬರಿಕಾರರ ಕಾದಂಬರಿಗಳಿಗೆ ನೆಲೆ ಆಗಿವೆ. ಪ್ರಕೃತಿ, ಹೆಣ್ಣು-ಗಂಡು, ಸಮಾಜ, ಜಾತಿ, ಆಧುನಿಕತೆ, ನಗರೀಕರಣ ಜಾಗತೀಕರಣ ಮುಂತಾದ ಅಂಶಗಳ ವಸ್ತುವಾಗಿ ಕಾದಂಬರಿಗಳನ್ನು ಪೋಷಿಸಿವೆ.

ಕಾರಂತರು ತಮ್ಮ ಸಮಕಾಲಿನ ಕಾದಂಬರಿಕಾರರಿಗಿಂತ ವಿಭಿನ್ನವಾಗಿ ತಮ್ಮ ಕಾದಂಬರಿಗಳಲ್ಲಿ ಮನುಷ್ಯ ಮತ್ತು ಭೂಮಿಯ ಸಂಬಂಧಗಳನ್ನು ಗುರುತಿಸಿರುವ ಬಗೆಯನ್ನು ಕಾಣಬಹುದಾಗಿದೆ. ಆದಿಮ ಸಂಸ್ಕೃತಿಯ-ಆಧುನಿಕ ಸಂಸ್ಕೃತಿಗಳ ಸಂಘರ್ಷಗಳು ಕಾರಂತರ ಅಭಿವ್ಯಕ್ತಿಯಲ್ಲಿ ಚಿತ್ರಿಸಿದ್ದಾರೆ. ಸುಮಾರು ಐವತ್ತೈದಕ್ಕೂ ಹೆಚ್ಚೂ ಕಾದಂಬರಿಗಳನ್ನು ರಚಿಸಿದ್ದಾರೆ.

ಭೂಮಿಯು ಮನುಷ್ಯನ ಅವಿಭಾಜ್ಯ ಅಂಗವಾಗಿದ್ದು ಅಗತ್ಯವಾದ 'ಆದಿ ಭೌತಿಕ' ನೆಲೆಯೂ ಕೂಡ ಆಗಿದೆ. ಮನುಷ್ಯನ ಹುಟ್ಟು ಸಾವು ನೋವು ಮೂರನ್ನು ಭೂಮಿಯೊಂದಿಗೆ ಜನಪದರು ಭೂಮಿ ತಾಯಿ ಎಂದು ಕರೆದಿದ್ದಾರೆ. ಭೂಮಿಯು ಒಂದು ದೊಡ್ಡ ಪ್ರಯೋಗಾಲಯವಿದ್ದಂತೆ ಭೂಮಿಯನ್ನು ಹೆಣ್ಣಿಗೆ ಹೋಲಿಸಿರುವುದು ಫಲವಂತಿಕೆಯಾಗಿ ಎಂದುಕೊಂಡೆ ಎಂದು ಬೇಳಬಹುದು. ಭೂಮಿ ಪೂಜೆ, ಬಲಿ ಪೂಜೆ, ಪ್ರಕೃತಿ ಆರಾಧನೆ ಇನ್ನು ಮುಂತಾದವುಗಳು ಅಸ್ತಿತ್ವದಲ್ಲಿವೆ.

ವೈಧಿಕ ಪುರಾಣಗಳಲ್ಲಿ ಆಕಾಶ ಗಂಡು, ಭೂಮಿ ಹೆಣ್ಣು. ಅಂತೆಯೇ ಜನಪದರು ಮಾಡುವ ಗೌರಿಪುಜೆ, ಬಲೀಂದ್ರ ಪೂಜೆ, ಕೊಂತಿಪೂಜೆಗಳು, ಕೂಡ ಫಲವಂತಿಕೆಯ ಕುರಿತ ಆಚರಣೆಗಳನ್ನು ಭೂಮಿ 'ಆಧಾರ' ಆಗಿರುವಲ್ಲಿ ಹೆಣ್ಣು ಹೌದು! ಗಂಡು ಹೌದು! ಹಾಗಾಗಿ ನೆಲವೇ ಆದಿ ಮತ್ತು ಅಂತ್ಯವಾಗಿದೆ. 'ಋಗ್ವೇದದಲ್ಲಿ ಪೃಥ್ವಿಯ ಆರಾಧಾನೆ ಇದೆ. ಬಹುಶಃ ಇದೇ ಭೂಮಿ ಕುರಿತ ಆರಂಭಿಕ ಚರ್ಚೆಗಳನ್ನು ಪೃಥ್ವಿ ಪದದಲ್ಲಿ 'ಪುಥ್' ಎನ್ನುವುದು ವಿಸ್ತಾರತೆಯ ಸಂಕೇತ ಹಾಗಾಗಿ ಭೂಮಿ ಸರ್ವವ್ಯಾಪಿ'[1] ಭೂಮಿ ಸ್ತ್ರೀ ಅನ್ನದಾತೆ, ಆಶ್ರಯದಾತೆ, ಜನ್ಮದಾತೆ! ಈ ಕಲ್ಪನೆಗಳು ನಮ್ಮ ಭಾರತೀಯ ಸಂಸ್ಕೃತಿಯ ಲಕ್ಷಣಗಳಾಗಿವೆ. ಭೂಮಿಯು ಚೈತನ್ಯದ ಸಂಕೇತವಾಗಿದೆ. ಆದಿಯ ಕಲ್ಪನೆ 'ಪೃಥವಿ' ಅಥವಾ ಪೃಥ್ವಿ ಮುಂದೆ 'ಪ್ರಕೃತಿ' ಆಗಿ ನೆಲೆ ನಿಂತಿರುವುದನ್ನು ಕಾಣಬಹುದು.

ಕಾರಂತರ ಕಾದಂಬರಿಗಳು ಮಾನವ ಮತ್ತು ನಿಸರ್ಗದ ಸಂಬಂಧಗಳ ರೂಪಕಗಳಾಗಿ ಕಂಡು ಬಂದಿವೆ. ಈ ರೂಪಕಗಳು ನೆಲೆಗಳ ಹೋರಾಟದಿಂದ ಕೂಡಿವೆ. ಇಂತಹ ಹೋರಾಟ ಒಮ್ಮೆ ಸೋಲಾಗಿವೆ ಮತ್ತೊಮ್ಮೆ ನೋವಾಗಿಯೂ ಕಂಡು ಬಂದಿವೆ. ಇಲ್ಲಿ ಮಾನವ ಭೂಮಿಯನ್ನು ಶೋಷಿಸಿದ್ದಾನೆ. ಅಲ್ಲಲ್ಲಿ ಭೂಮಿಯು ನಲುಗುವಂತೆ ಕಲ್ಪಿಸುತ್ತದೆ. ಭೂಮಿಯ ನೆಲೆಗಳಾದ ಕಾಡು, ಭೂಮಿ ನದಿ ಮತ್ತು ಕಡಲು, ಬೆಳಕು ಮತ್ತು ಗಾಳಿ ಇವುಗಳ ಮುಖಾಂತರ ಮನುಷ್ಯನು ಭೂಮಿಯೊಂದಿಗೆ ಹೊಂದಿರುವ ವಿವಿಧ ಸಂಬಂಧಿತ ನೆಲೆಗಳನ್ನು ಶೋಧಿಸಿದ್ದಾರೆ. ಭೂಮಿಯಿಲ್ಲದೆ ಜೀವಸಂಕುಲದ ಅಸ್ತಿತ್ವವನ್ನು ಊಹಿಸಿಕೊಳ್ಳಲು ಸಾಧ್ಯವಿಲ್ಲ. ಇಂತಹ ಪರಿಸರದಲ್ಲಿ ಮನುಷ್ಯ ಸಂಸ್ಕೃತಿಯಲ್ಲಿ ತನ್ನ ಬದುಕನ್ನು ಕಟ್ಟಿಕೊಂಡು ಜೀವಿಸುತ್ತಿದ್ದಾನೆ. ಈ ಬದುಕಿನಲ್ಲಿ ಅವನ ಸಮಾಜ, ಕುಟುಂಬಗಳು ಒಳಗೊಂಡಿವೆ. ಹೀಗೆ ಮನುಷ್ಯನು ಭೂಮಿಯೊಂದಿಗೆ ವಿವಿಧ ರೀತಿಯಲ್ಲಿ ಮನುಷ್ಯ ಹೊಂದಿರುವ ಸಂಬಂಧಗಳನ್ನು ಜೈವಿಕ ನೆಲೆಗಳು ಎಂದು ಪರಿಗಣಿಸಬಹುದು. ಇಂತಹ ಜೈವಿಕ ನೆಲೆಗಳು ಒಳಗೊಂಡ ಕಾದಂಬರಿಗಳೆಂದರೆ 'ಬೆಟ್ಟದ ಜೀವ' ಕುಡಿಯರ ಕೂಸು' ಚೋಮನ ದುಡಿ', ಮರಳಿ ಮಣ್ಣಿಗೆ, ಇದ್ದರು ಚಿಂತೆ, ಧರ್ಮರಾಯನ ಸಂಸಾರ' ಚಿಗುರಿದ ಕನಸು, ಮೊದಲಾದವು.

ಈ ಕಾದಂಬರಿಯಲ್ಲಿ ಕಾರಂತರು ಕೊಡಗಿನ ಮಂಜುನಾಥಯ್ಯನವರ ಮನೆಗೆ ಬೇಟೆ ನೀಡಿದಾಗ, ಅವರು ವಾಸಮಾಡುವ ಬದುಕಿನ ಸ್ಥಳವು ಮಲೆನಾಡ ಪ್ರದೇಶವಾಗಿರುತ್ತದೆ. ಅಂತಹ ಪ್ರದೇಶಕ್ಕೆ ಹೋಗುವ ದಾರಿಯಲ್ಲಿ ಬಸ್ಸು ಕೆಟ್ಟು ಕೂತು ಕಾರಣವಾಗಿ ಅವರು ಬೆಟ್ಟಗಳ ಮಾರ್ಗವಾಗಿ ಹೋಗುತ್ತಾರೆ. ಆಗ ಅವರಿಗೆ ನಿಸರ್ಗದ ಮುಂದೆ ಮನುಷ್ಯನ ನೆಲೆ ಬಗ್ಗೆ ಅರಿವಾಗುತ್ತದೆ. ಅದನ್ನು ಕುರಿತು ಅವರು ನನಗೆ ಬೆಟ್ಟಗಳನ್ನು ಕಂಡಾಗಲೆಲ್ಲ ಅವುಗಳ ಧೀಮಂತಿಕೆಯೇ ಹೊಡೆದು ಕಾಣಿಸುತ್ತದೆ. ಅವು ಆರಡಿ ಪೂರ್ತಿ ಬೆಳೆಯದ ನಮ್ಮಂತಹರನ್ನು ಕಂಡು ನೀನೇಷ್ಟರವ? ಎಂದು ಕೆಣಕುವಂತೆ ತೋರುತ್ತಿತ್ತು. ಬೆಟ್ಟದ ಉನ್ನತಿಯಾಗಲಿ ದೀರ್ಘಾಯುಷ್ಯವಾಗಲಿ ಮನುಷ್ಯರಿಗಿಲ್ಲ ನಿಜ. ಮನುಷ್ಯನಿಗೆ ಅಲ್ಪ ಆಯುಷ್ಯದಲ್ಲಿ ಅವಶ್ಯವಿರುವ ಧಿಮಾಕು ಏತಕ್ಕೆ ಬರಬಾರದು, ಬಂದಿಲ್ಲವೇ ಕೆಲವರಿಗಾದರೂ? ಎಂಬೊಂದು ಪ್ರಶ್ನೆ ಕಾಣಿಸಿಕೊಂಡು, ಥಟ್ಟನೆ ಒಂದು ಆಯ್ಕೆ ಹೊಳೆಯಿತು. 'ಬೆಟ್ಟದ ಜೀವ' ಎಂಬ ಮಾತದು ಕಾರಂತರು ಬೆಟ್ಟದ ಜೀವ ಕಾದಂಬರಿಯನ್ನು ಕುರಿತು ಬರೆಯಲು ಸ್ಪೂರ್ತಿಯ ಬಗ್ಗೆ ತಮ್ಮ ಅಭಿಪ್ರಾಯವನ್ನು ಹೇಳಿದ್ದಾರೆ.

ಕಾದಂಬರಿಯ ಪ್ರಮುಖ ಪಾತ್ರಗಳಾದ ನಿರೂಪಕ ಶಿವರಾಮಯ್ಯ, ಗೋಪಾಲಯ್ಯ, ನಾರಾಯಣಯ್ಯ, ದೇರಣ್ಣಗೌಡ ಮುಂತಾದವರು. ದಟ್ಟವಾದ ಕಾಡಿನ ಮದ್ಯೆದಲ್ಲಿ ಏಳೆಂಟು ಎಕ್ಕರೆ ಕಾಡನ್ನು ಸವರಿಕೊಂಡು ವ್ಯವಸಾಯಕ್ಕೆ ಯೋಗ್ಯವಾದ ಭೂಮಿಯನ್ನಾಗಿ ಮಾಡಿಕೊಂಡು ಕೆಲವು ಕೂಲಿ ಆಳುಗಳೊಂದಿಗೆ ನೆಲಸಿದ ಚಿತ್ರಣ ಮತ್ತು ಮುಂದೆ ಅದೆ ಪರಿಸರದ ಕಟ್ಟ ಎಂಬಲ್ಲಿ ಗೋವಿಂದಯ್ಯ ಎಂಬ ಜಮೀನ್ದಾರನ ಬದುಕಿನ ಚಿತ್ರಣವನ್ನು ಈ ಕಾದಂಬರಿಯಲ್ಲಿ ಕಾಣಬಹುದಾಗಿದೆ. ನಿಸರ್ಗದ ಜೈವಿಕ ನೆಲೆಯಲ್ಲಿ ಜೀವನ ನಡೆಸುವುದು ಹೇಗೆಂಬುದನ್ನು ಕಂಡುಕೊಂಡಿರುವುದು ಬಹುಮುಖ್ಯವಾಗಿದೆ. ಕಾದಂಬರಿಯ ಮುಖ್ಯ ಪಾತ್ರಗಳಾಗಿ

ಗೋಪಾಲಯ್ಯ ಮತ್ತು ಶಂಕರಮ್ಮ ಕಂಡುಬರುತ್ತಾರೆ. ಇವರು ಕಾಡನ್ನು ನಾಡನ್ನಾಗಿ ಪರಿವರ್ತಸಿ ತಮ್ಮ ಜೈವಿಕ ಅಸ್ತಿತ್ವವನ್ನು ಕಟ್ಟಿಕೊಂಡಿದ್ದಾರೆ. "ಒಬ್ಬಿಬ್ಬರು ಬ್ಯಾರಿಗಳಿಗೆ ಗೇಣಿಗೆ ಕೊಟ್ಟು ನೋಡಿದೆ ಅವರು ಅಡಿಕೆ ಮರದ ಕುಡಿಯನ್ನು ಕಂಡರೇ ಹೊರತು, ಅದರ ಬುಡವನ್ನು ಕಾಣಲಿಲ್ಲ. ಬುಡಕ್ಕೆ ಈಟು ಬಿದ್ದರೆ ಕುಡಿಯಲ್ಲಿ ಫಲ ಉಂಟೆಂದು ಅವರು ತಿಳಿಯಲಾರರು. ಅಲ್ಲದೆ ಗೇಣಿಯಾದರೂ ಮನೆಗೆ ಬರುತ್ತಿತ್ತೆ? ಸಾಕು ಸಾಕಾಯಿತು."[1] ನಾರಾಯಣ ಬರುವ ಮೊದಲು ಗೋಪಾಲಯ್ಯನು ತನ್ನ ಜಮೀನನ್ನು ಸಾಗುವಳಿ ಮಾಡಲು ಒಕ್ಕಲುಗಳಿಗೆ ಕೊಟ್ಟದ್ದನು. ಒಕ್ಕಲುಗಳು ಬೇಜವಾಬ್ದಾರಿತನದಿಂದ ಸ್ವಂತ ಭೂಮಿಯನ್ನಾಗಿ ನೋಡಿಕೊಂಡು ಹೋಗದೆ ಬರಿ ಕೂಲಿಯಾಳುಗಳಂತೆ ಕೆಲಸ ನಿರ್ವಹಿಸುವುದನ್ನು ಕಂಡು ಭೂ ಮಾಲಿಕನಾದ ಗೋಪಾಲಯ್ಯ ಈ ಮೇಲಿನಂತೆ ನುಡಿಯುತ್ತಾನೆ. ಅವರಿಂದ ಸರಿಯಾಗಿ ಗೇಣಿಯು ಬರದ ಸ್ಥಿತಿಯನ್ನು ಕಂಡು ತನ್ನ ಮನದ ಇಂಗಿತವನ್ನು ಈ ರೀತಿ ವ್ಯಕ್ತಪಡಿಸಿದನು. ನಂತರ ನಾರಾಯಣನ್ನು ಸ್ವಂತ ಒಕ್ಕಲು ಮಗನನ್ನಾಗಿ ಸ್ವೀಕರಿಸಿರುವುದನ್ನು ಕಾಣಬುದಾಗಿದೆ. "ನೀವು ಮನಸ್ಸು ಮಾಡಿದರೆ ಇದಕ್ಕೂ ಒಳ್ಳೆದಾದಂಥ ಭೂಮಿ, ಮನೆಗಳನ್ನು ಅರಸುವುದು ನಿಮಗೆ ಸಾಧ್ಯವಿರಲಿಲ್ಲವೇ? ನಿಮಗೇನು ಈ ಕೊಂಪೆಯಲ್ಲಿ ಖಾಯಿಸು? ನಾನಂತು ವರ್ಷಕ್ಕೆ ಸಾವಿರ ರೂಪಾಯಿ ವರಮಾನ ಬಂದರೂ ಇಲ್ಲಿ ನಿಲ್ಲಲಾರೆ."[2] ನಿರೂಪಕರಾದ ಶಿವರಾಮಯ್ಯನವರು ಗೋಪಾಲಯ್ಯನ ಕಾಡು ಜೀವನದ ಬೇಸಾಯವನ್ನು ಕಂಡು ಈ ಮೇಲಿನಂತೆ ತಮ್ಮ ಮನದ ಅಭಿಲಾಷೆಯನ್ನು ಈ ರೀತಿ ವ್ಯಕ್ತಪಡಿಸುತ್ತಾರೆ. ಬಹಳಷ್ಟು ಜನರು ಕಾಡಿನಲ್ಲಿ ಹಲವಾರು ವಿಧದ ಹೊಸ ಹೊಸ ಅನುಭವಗಳನ್ನು ಪಡೆಯುತ್ತಾ ಜೀವನ ನಡೆಸುವುದು ಗಮನಾರ್ಹವಾದುದಾಗಿದೆ. ಶಿವರಾಮಯ್ಯ ಅವರ ಬದುಕನ್ನು ಕಂಡು ಆಶ್ಚರ್ಯಪಡುತ್ತಾನೆ. "ಇಲ್ಲಿನ ನಮ್ಮ ತೋಟ ದೇರಣ್ಣನ ತಂದೆಗೆ ಗೇಣಿಗೆ ಕೊಟ್ಟಿತ್ತು ಹೀಗಾಗಿ ಊರಿಗೆ ಮರಳಲಿಲ್ಲ. ಒಬ್ಬನೇ ಇದ್ದು, ಹೊಲ, ಮನೆ ಮಾಡುವ ಸಾಹಸನನಗಿಲಿಲ್ಲ."[3] ಗೋಪಾಲಯ್ಯನು ತಂದೆ ತಾಯಿಗಳು ತೀರಿಕೊಂಡ ನಂತರ ತನ್ನ ಕಾಡು ಜೀವನದ ವೃತ್ತಾಂತವನ್ನು ಶಿವರಾಮಯ್ಯನವರ ಜೊತೆ ಹಂಚಿಕೊಂಡಿರುವುದನ್ನು ಕಾಣಬಹುದು. ಗೋಪಾಲಯ್ಯನ ಜಮೀನನ್ನು ದೇರಣ್ಣನ ತಂದೆ ತಾಯಿಗಳೆ ಗೇಣಿರೂಪದಲ್ಲಿ ವ್ಯವಸಾವನ್ನು ಮಾಡುತ್ತಿದ್ದರು. ತಂದೆ ತಾಯಿಗಳು ಕಾಲವಸವಾದ ಮೇಲೆ ಇವನು ಊರನ್ನು ಬಿಟ್ಟದ್ದು ಉಂಟು. ಆಗ ಇವನ ತೋಟದ ಗೇಣಿಯನ್ನು ಇವರ ಸೋದರ ಮಾವನು ಇವನಿಗೆ ಸಲ್ಲುವ ಗೇಣಿಯನ್ನು ವಶಪಡಿಸಿಕೊಂಡಿದ್ದನು. ಪ್ರಾಯಕ್ಕೆ ಬಂದ ಗೋಪಾಲಯ್ಯನ ಮನಸ್ಸಿನಲ್ಲಿ ಮದುವೆಯ ಹಂಬಲ ಚಿಗುರೊಡೆಯಿತು. ದಿಕ್ಕು ದೆಸೆಯನ್ನು ಕಾಣದ ಇವನು ಪಡುವಲ ಸೀಮೆಯನ್ನೆಲ್ಲ ತಿರುಗಾಡಿ ವಿಟ್ಲ ಸೀಮೆಯ ನಾಲ್ಕು ಮುಡಿ ಗದ್ದೆಯ ಒಡೆಯನಾದ ಪರಮೇಶ್ವರಭಟ್ಟರ ಮಗಳಾದ ಶಂಕರಿಯನ್ನು ಕೈ ಹಿಡಿದ ಮೇಲೆ ಸಂಸಾರವನ್ನು ಅನ್ಯೋನ್ಯತೆಯಿಂದ ನಡೆಸಿಕೊಂಡು ಹೋಗುತ್ತಿದ್ದನು. "ಕಳೆದ ವರ್ಷ ಅರ್ಧ ಎಕ್ರೆಯಲ್ಲಿ ಕಬ್ಬು ನೆಟ್ಟು, ಹತ್ತು ಮಣಗಳೂ ಬರಲಿಲ್ಲ. ಅಹುದು, ವರ್ಷವೆಲ್ಲ ನೆಟ್ಟು, ಬೆಳೆಸಿ, ಕಾದು, ಕಬ್ಬು ಕೈಗೆ ಬರುತ್ತದೆ ಎನ್ನುವಾಗ ಹಂದಿ, ಕಾಡಾನೆಗಳಿಗೆ ಅವನ್ನು ಬಲಿಕೊಡಬೇಕಾಗಿ ಬಂದರೆ ಯಾರಿಗೆ ಮನಸ್ಸು ಬಂದೀತು?"[4] ಕಾಡಾನೆಗಳ ಉಪದ್ರವದಿಂದ ಬೇಸತ್ತಿದ್ದ ದೇರಣ್ಣ ಬೇಸಾಯದ ಬಗ್ಗೆ ಬೇಸರವನ್ನು ವ್ಯಕ್ತಪಡಿಸುತ್ತಾನೆ. ಕಾಡಿನಲ್ಲಿ ಕಾಡು ಪ್ರಾಣಿಗಳು ಒಂದಿಲ್ಲ ಒಂದು ರೀತಿಯಲ್ಲಿ ಮನುಷ್ಯನಿಗೆ ತೊಂದರೆಯನ್ನು ಕೊಡುತ್ತಿರುವುದರಿಂದ ದೇರಣ್ಣನಂತಹ ಹಲವಾರು ಒಕ್ಕಲುಗಳು ಈ ತೊಂದರೆಯನ್ನು ಎದುರಿಸಬೇಕಾಗಿತ್ತು. ಇದರ ಜೊತೆಗೆ ಕೂಲಿಯಾಳುಗಳ ಸಮಸ್ಯೆಯನ್ನು ಕೂಡ ಎದುರಿಸಬೇಕಾಗಿತ್ತು. ಇದರಿಂದ ಗೋಪಾಲಯ್ಯನೂ ಕೂಡ ಚಿಂತೆಗೀಡಾಗಿ ಯೋಚಿಸುತ್ತಾ ಕುಳಿತನು.

"ದುಡಿಯಲು ನೆಲ ತೋರಿಸಿದರು; ಇರಲು ಮನೆಯನ್ನು ಕೊಟ್ಟರು. ಅವರೇ ಮದುವೆ ಮಾಡಿಸಿದರು."[5] ತಂದೆ ತಾಯಿಗಳಿಲ್ಲದೆ ತಬ್ಬಲಿಯಾಗಿದ್ದ ನಾರಾಯಣ ಗೋಪಾಲಯ್ಯನ ಉಪಕಾರವನ್ನು ಸ್ಮರಿಸುತ್ತಾನೆ. ದೇರಣ್ಣನ ನಂತರ ನಾರಾಯಣನು ಗೇಣಿದಾರನಾಗಿ ಬದುಕನ್ನು ಕಟ್ಟಿಕೊಂಡ ಸಂದರ್ಭವನ್ನು ಕುರಿತು ನಿರೂಪಕರಿಗೆ ತನ್ನ ಬದುಕಿನ ಅನುಭವಗಳನ್ನು ಹಂಚಿಕೊಳ್ಳುತ್ತಾನೆ. ದುಡಿಯಲು ಭೂಮಿಯನ್ನು ಗೇಣಿರೂಪದಲ್ಲಿ ಕೊಟ್ಟು ಬದುಕಲು ಆಶ್ರಯವನ್ನು ನೀಡಿದ್ದ ಗೋಪಾಲಯ್ಯನ ಉಪಕಾರವನ್ನು ಸ್ಮರಿಸುವುದನ್ನು ನೋಡಬಹುದು. ಆಗ ನಿರೂಪಕರು ನಾರಾಯಣನ್ನನಿಗೆ ಈ ಭೂಮಿಯನ್ನು ಗೇಣಿಗೆ ಕೊಟ್ಟದ್ದಾರೆಯೇ ಎಂದು ಕೇಳುತ್ತಾರೆ. ಸ್ವಂತ ಅಳಿಯನಂತೆ ದುಡಿಯುತ್ತಿದ್ದ ನಾರಾಯಣನು ನಗುತ್ತ ಗೇಣಿಯೇ ಗೇಣಿಯಾದರೆ ಎಷ್ಟೊಂದು ಗೇಣಿ ಕೊಡಬೇಕಾಗಬಹುದು ಅದರ ಬದಲು ಮಾವಯ್ಯನವರು ಬೇಳೆದುದರಲ್ಲಿ ನನಗೆ ಅರ್ಧ ಭಾಗ, ನಿನಗೆ ಅರ್ಧಭಾಗ ಎಂದು ಹೇಳಿದ್ದಾರೆ. ಇಲ್ಲಿಯವರಗೂ ಅದೇ ರೀತಿಯಾಗಿ ಸಮನಾಗಿ ಹಂಚಿಕೊಂಡು ಬದುಕುತ್ತಾ ಬಂದಿದ್ದೇವೆ. ಯಾವ ವರ್ಷನೂ ಕೂಡ ನನಗೆ ಅಷ್ಟು ಬೇಕು ಇಷ್ಟು ಬೇಕು ಎಂದು ಕೇಳಿದವರಲ್ಲ. ಬೆಳೆದುದರಲ್ಲಿ ಸಮನಾಗಿ ಹಂಚಿಕೊಂಡು ಬಂದಿದ್ದೇವೆ. ಎಂದೂ ಕೂಡ ಅವರು ನನ್ನ ಮೇಲೆ ಸಿಟ್ಟುಮಾಡಿಕೊಂಡವರಲ್ಲ. ಎಂದಿಗೂ ನಾವು ಒಬ್ಬರಿಗೊಬ್ಬರು ಮನಸ್ತಾಪ ಮಾಡಿಕೊಂಡವರಲ್ಲ ಎಂದು ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾನೆ. ನಾರಾಯಣನಾಗಲಿ ಗೋಪಾಲಯ್ಯನಾಗಲಿ ಎಂದು ಜಗಳವಾಡಿದವರಲ್ಲ ಒಬ್ಬರಿಗೊಬ್ಬರು ಅನ್ಯೋನ್ಯತೆಯಿಂದ ಬದುಕಿದವರಾಗಿದ್ದರು. ಫಸಲು ಕೈಗೆ ಬಂದಾಗಲೂ ಕೂಡ ಬಹಳ ಉತ್ಸಾಹದಿಂದ ಉತ್ಸುಕರಾಗಿ ಬಂದಂತಹ ಫಸಲನದನು ಮಾರಾಟ ಮಾಡುತ್ತಿದ್ದರು. ಗೋಪಾಲಯ್ಯನು ತಮ್ಮ ಒಡನಾಡಿಗಳಿಗೆ ಶಿವರಾಮಯ್ಯನನ್ನು ಪರಿಚಯಿಸುವಾಗ ಇವರು ತಹಶಿಲ್ದಾರರು ಎಂದು ತಮಾಸೆಯಾಗಿ ಪರಿಚಯಿಸುತ್ತಾನೆ. ಆಗ ದೇರಣ್ಣನು ತಮ್ಮ ಕುಮ್ಕಿ (ಗಾಮಾಳ) ಜಮೀನಿನ ಬಗ್ಗೆ ತಿಳಿಸುತ್ತಾ "ಬೇಲಿ ಹಾಕಿದ್ದು ಸ್ವಂತ ಕೆಲಸ ಮಾಡಿ. ಹಾಗೆ ಹಾಕಿದರೆ, ಏನೋ ಜಾಗ ನನ್ನದಾಗಿ ಉಳಿಯುತ್ತದಲ್ಲ– ಎಂಬ ಆಸೆಯಿಂದ ಮಾಡಿದೆ. ನಾಳೆ ಯಾರಾದರೂ ನಾಲ್ಕು ಮಂದಿ ಬ್ಯಾರಿಗಳು ಬಂದು, ಶ್ಯಾನುಭಾಗರನ್ನು ಹಿಡಿದು, ಅಗಳನ್ನು ಹಾಕಿಸಿ, ನಾಲ್ಕು ಗಿಡ ನೆಟ್ಟರೆ, ನನ್ನ ಮಕ್ಕಳ ಪಾಲಿಗೆ ಸಿಗಬಹುದಾದ ಈ ಒಂದು ಗೇಣು ಜಾಗವೂ ತಪ್ಪೀತಲ್ಲ ಎಂಬ ಹೆದರಿಕೆ."[6] ಗೇಣಿದಾರನಾಗಿ ದುಡಿಯುತ್ತಿದ್ದ ದೇರಣ್ಣನು ಸ್ವಂತ ಜಮೀನ್ದಾರನಾಗಬೇಕೆಂಬ ಕನಸು ನನಸಾಗಿಸಿಕೊಳ್ಳುವ ತವಕವನ್ನು ಕಾಣಬಹುದು. ಸರಕಾರದ ಭೂಮಿಯನ್ನು ಹೇಗೋ ಸಾಗುವಳಿ ಮಾಡಿ ಸ್ವಂತ ಭೂಮಿಯನ್ನಾಗಿ ಮಾಡಿಕೊಳ್ಳುವ ದೇರಣ್ಣನು ಅವನ ದೃಷ್ಟಿಯ್ಲುಲಿ ತಹಶಿಲ್ದಾರನಂತೆ ಕಂಡ ಶಿವರಾಮಯ್ಯನ ಹತ್ತರ ತನ್ನ ಮನದ ಆಸೆಯನ್ನು ವ್ಯಕ್ತಪಡಿಸಿರುವುದನ್ನು ನೋಡಬಹುದು. ಹೀಗೆ ಒಕ್ಕಲು ಮಕ್ಕಳು ಕೂಡ ಭೂಮಿಗಾಗಿ ಪರಿತಪಿಸುವ ಬಗೆಯನ್ನು ಕೂಡ ಈ ಕಾದಬಂರಿಯಲ್ಲಿ ಗ್ರಹಿಸಬಹುದು.

ದೇರಣ್ಣನ ಕತಯೇ ಹೀಗೆ "ನನ್ನ ಕಾಟುಮೂಲೆಯ ಹಾಗೆ ಇನ್ನೊಂದು ಕಾಟುಮೂಲೆ ಮಾಡುತ್ತೇನೆ ಎಂದು ನಾಲ್ಕು ದಿವಸ ಹಾರಾಡಿದ. ಅವನು ಸ್ವಲ್ಪ ಕಷ್ಟಪಟ್ಟದ್ದೇನೋ ನಿಜ. ತಾನೇ ಕಡಿದು, ಮಾಡಿ, ನಾಲ್ಕು ಸುತ್ತಲೂ ಅಗಳನ್ನು ಹಾಕಿದ. ಕೊನೆಗೆ ನಿರಿಲ್ಲ ಎಂಬುದನ್ನು ತಿಳಿದು, ಎಲ್ಲವನ್ನೂ ಬಿಟ್ಟುಬಿಟ್ಟ." ಸ್ವಂತ ಭೂಮಿಯೇ ಇಲ್ಲದ ದೇರಣ್ಣ ಕಾಡನ್ನು ಕಡಿದು ಮೂಲೆಯಲ್ಲಿರುವ ಜಾಗವನ್ನು ಸಾಗುವಳಿ ಏನೋ ಮಾಡಿದನು. ಆದರೆ ಅದಕ್ಕೆ ಸರಿಯಾದ ನೀರು ಇಲ್ಲದೆ ಫಸಲು ಕೈಗೆ ಸಿಗದೆ ಹೋದ್ದರಿಂದ ಅದನ್ನು ಕೈ ಬಿಟ್ಟದ್ದು ಉಂಟು ಎಂದು ದೇರಣ್ಣನ ವ್ಯವಸಾಯದ ಕತೆಯನ್ನು ಗೋಪಾಲಯ್ಯನು ನಿರೂಪಕರಿಗೆ ತಿಳಿಸಿ ಹೇಳಿದನು. ಆಗ ನಿರೂಪಕರೊಂದಿಗೆ ಚರ್ಚಿಸುತ್ತ ಗೋಪಾಲಯ್ಯನು ಕೂಡ ಶಿವರಾಮಯ್ಯನ ಚಾರಿತ್ರಿಕ ಹಿನ್ನೆಲೆಯ ಬಗ್ಗೆ ಚರ್ಚಿಸುತ್ತ, ನಿಮ್ಮ ಸ್ವಂತ ಊರು ಯಾವುದು? ನೀವು ಮಾಡುತ್ತಿರುವ ಕೆಲಸವೇನು? ಇವ್ಯಾವುದನ್ನು ನಮಗೆ ಹೇಳಲಿಲ್ಲವಲ್ಲ! ಕೆಲಸ ಭೂಮಿ ಸಾಗುವಳೀಯೋ? ನಿಮಗೆ ಭೂಮಿ ಎಷ್ಟಿದೆ? ಎಂದು ಅವರ ವೈಯಕ್ತಿಕ ವಿಚಾರದ ಹಿನ್ನೆಲೆಯನ್ನು ವಿಚಾರಿಸಿದಾಗ ಶಿವರಾಮಯ್ಯನವರು ಕೆಲಸವೂ ಇಲ್ಲ, ಏನೂ ಇಲ್ಲ. ಹೀಗೆ ಊರುರು ತಿರುಗುವುದು ನನ್ನ ಕೆಲಸ ಎಂದು ತಮಾಸೆಯಾಗಿ ವಿವರಿಸಿ ಹೇಳಿದಾಗ, ಗೌಡರು ಉದ್ಯೋಗದ ಜೊತೆಗೆ ವ್ಯವಸಾಯದ ಮಹತ್ವವನ್ನು ಕುರಿತು ತಿಳಿಸಿದರು. "ನಮ್ಮ ಕಾಲಕ್ಕೆ ಆಸ್ತಿ, ಜಮೀನುಗಳಿಗೆ ಒಂದು ಮರ್ಯಾದೆಯಿದ್ದಿತ್ತು; ಮಾಡಿದೆವು. ಈಗ ಇಂಗ್ಲೀಷಿಗೆ ಹೆಚ್ಚಿನ ಮರ್ಯಾದೆ; ಅದ್ನು ಕಲಿಸಿದೆವು. ನಿಜ–ಒಬ್ಬನೇ ಮಗನಿದ್ದಾಗ, ನನ್ನಂತೆ ಅವನು ಬೇಸಾಯಕ್ಕಿರಲಿ; ಇಂಗ್ಲೀಷಿಗೆ ಕಳುಹಿಸಬಾರದಾಗಿತ್ತು ಎಂದು ಕಾಣುತ್ತದೆ ಒಮ್ಮೊಮ್ಮೆ. ಆದರೆ, ಅವನನ್ನು ಮನೆಯಲ್ಲಿ ಇರಿಸಿಕೊಂಡಿದ್ದರೆ, ಇದ್ದುದನ್ನೆಲ್ಲ ಮಾರಾಟಮಾಡಿ ಪೇಟೆ ಶಹರನ್ನು ಸೇರುವುದಿಲ್ಲ ಎಂಬುದು ಏನು ನಿಶ್ಚಯ? ಎಷ್ಟೋ ಜನ ಆಸ್ತಿವಂತರು, ಪೇಟೆಯ ಭ್ರಮೆಗೆ ಇದ್ದುದನ್ನೆಲ್ಲ ಮಾರಿದ್ದುಂಟು, ಭೂಮಿ ಗೇಣಿಗೆ ಕೊಟ್ಟು, ಪೇಟೆಯಲ್ಲಿ ಕುಳಿತು ಉಣ್ಣುವವರಿದ್ದಾರೆ. ಅದರಿಂದ ಏನು ಮಾಡಿದ ಹಾಗಾಯಿತು?" ಗೋಪಾಲಯ್ಯನು ತನ್ನ ಆಸ್ತಿ ಒಡೆತನದ ಹಕ್ಕಿನ ಹಾಗೂ ಉಳಿವಿನ ಬಗ್ಗೆ ಹೊಂದಿರುವ ಅಭಿಮಾನ ಮತ್ತು ಪ್ರೀತಿಯನ್ನು ಕಾಣಬಹುದು. ಆಸ್ತಿ ಇದ್ದರೆ ಭೂಮಿಯನ್ನು ಗೇಣಿರೂಪದಲ್ಲಿ ದುಡಿಸಬಹುದು. ಗೇಣಿಯಿಂದ ಬಂದಂತಹ ಹಣದಿಂದ ಸಾಕಷ್ಟು ಜನರು ನಮ್ಮ ಕಣ್ಮುಂದೆ ಇರುವುದನ್ನು ಗಮನಿಸಬಹುದು. ಆದರೆ ಆ ದುಡಿಮೆಯ ಸುಖ, ಬೇಳೆಯುವ ಸುಖ, ಒಕ್ಕಲುಗಳಿಂದ ಕೊಂಡು ಜೀವನ ನಡೆಸಬೇಕೆಂಬ ದುರಾಸೆ ನನ್ನಲ್ಲಿ ಇಲ್ಲ. ಆಸ್ತಿ ಇದ್ದರೆ ತೋಟವನ್ನು ಸಾಗುವಳಿ ಮಾಡಿಸಿ, ಬೆಳೆ ಬೆಳೆದು, ಮಾರಾಟ ಮಾಡಿ ಉಂಡರೆ ಅದು ಒಂದು ರೀತಿ ಸುಖವಿರುತ್ತದೆ. ದಿನನಿತ್ಯ ದುಡಿಯುವಾಗ, ಬೆಳೆಯುವ ಫಸಲು ನೋಡುವಾಗ, ಗಿಡ ಬೆಳೆಯುವಾಗ, ಪೈರು ಕೊಯ್ಯುವಾಗ ಸಿಗುವ ಸಂತೋಷವನ್ನು ಕಾಣಬೇಕೆಂಬುದು ನನ್ನ ಮನದಾಳದ ಆಸೆ ಎಂದು ಶಿವರಾಮಯ್ಯನವರಿಗೆ ತನ್ನ ಆಸ್ತಿಯ ಬಗ್ಗೆ ಈ ರೀತಿ ವರ್ಣಿಸಿರುವುದನ್ನು ಕಾಣಬಹುದು. ಹೀಗೆ ತನ್ನ ಜಮೀನಿನ ವ್ಯವಸಾಯದ ಬಗ್ಗೆ ಮಾತನಾಡುತ್ತ ತಾನು ಉಳುಮೆ ಮಾಡುವ ಸಂದರ್ಭದಲ್ಲಿ ಏನೆಲ್ಲ ಕಷ್ಟಗಳು ಎದುರಾಗುತ್ತವೆ ಎನ್ನುವುದಕ್ಕೆ, ಕಾಡಿನ ವ್ಯಸಾಯವಾದ್ದರಿಂದ ಅವರಿಗೆ ಸಮನಾದ ಒಕ್ಕಲು ಮಕ್ಕಳು ಸಿಗುತ್ತಿರಲಿಲ್ಲ. ಕಾರಣ ಈ ಪ್ರಾಂತದಲ್ಲಿ ಕಾಡು ಪ್ರಾಣಿಗಳ ಉಪದ್ರವದಿಂದ. ಬಂದರೂ ಕೂಡ ಬಿತ್ತುವ ಸಮಯಕ್ಕೆ ಬರುತ್ತಾರೆ, ಬೇಸಿಗೆಯಲ್ಲಿ ಪುನಃ ತಮ್ಮ ಊರುಗಳಿಗೆ ಹೋಗಿಬಿಡುತ್ತಿದ್ದರು. ಅಡಿಕೆ ತೋಟದ ಆಳುಗಳ ಹಣೆಬರವೆ ಹೀಗಿತ್ತು. ಖಾಯಂ ಆಗಿ ನೆಲೆಯೂರಿ ಕೆಲಸ ಮಾಡಿದರೆ, ಹತ್ತಾರು ಒಕ್ಕಲು ಮನೆಗಳಿಗೆ ಬಂದು ನೆಲೆಯೂರಲು ಅವಕಾಶವಿದೆ. ಆದರೆ ಕಾಡಿನ ಮಧ್ಯೆಯಾದುದ್ದರಿಂದ ಯಾರೂ ಮನಸ್ಸು ಮಾಡುತ್ತಿರಲಿಲ್ಲ. ಇದರಿಂದ ಈ ಬೆಟ್ಟ ಗುಡ್ಡಗಳಲ್ಲಿ ವಾಸಿಸುವ ಜಮೀನ್ದಾರರು ಈ ರೀತಿ ತೊಂದರೆಗಳನ್ನು ಅನುಭವಿಸುವುದನ್ನು ಕೂಡ ನಾವು ಕಾಣಬಹುದು.

ಹೀಗೆ ನಾರಾಯಣನು ತನ್ನ ಬದುಕಿನ ವೃತ್ತಾಂತದ ಜೊತೆಗೆ ತನ್ನನ್ನು ಸ್ವಂತ ಅಳಿಯನಂತೆ ಕಂಡು ಇರಲು ಆಶ್ರಯವನ್ನು ಕೊಟ್ಟು ಕಾಪಾಡಿದ ಮಾವಯ್ಯನ ಉಪಾಕಾರವನ್ನು ಸ್ಮರಿಸಿಕೊಳ್ಳುತ್ತ, ಮುಂದೆ ಶಿವರಾಮಯ್ಯನಿಗೆ ತೋಟದ ಬಗ್ಗೆ ಪರಿಚಯಿಸುತ್ತ ಮುನ್ನಡೆಯುತ್ತಿದ್ದನು. ಕಾಡಿನ ಮಧ್ಯದ ನದಿಯ ಬಗ್ಗೆ ಪರಿಚಯಿಸುತ್ತ ಆ ದಿನ ಪರಿಸರದ ನೋಟವನ್ನು ಕಣ್ತುಂಬಿಕೊಂಡು, ನದಿಯ ಸುತ್ತಮುತ್ತಲಿನ ನೋಟವನ್ನು ಗಮನಿಸುತ್ತ ಹೊರಟಾಗ ಒಮ್ಮೆಗೆ ನಾಲ್ಕಾರು ಬೀಳಲಿನ ಕಂಬಗಳು ಅವರ ಕಣ್ಣಿಗೆ ಬಿದ್ದವು. ಅದರ ರಚನೆಯ ವಿಚಿತ್ರವನ್ನು ಕಂಡು ವಿಸ್ಮಯಗೊಂಡರು. ನಾರಾಯಣನು ಇದರ ಬಗ್ಗೆ ತಿಳಿಸುತ್ತಾ ಮಾವಯ್ಯನ ಅಧಿಕಾರದ ಅಂತಸ್ತಿಗೆ ಈ ಕಂಬಗಳೇ ಸಾಕ್ಷಿ, ನೋಡಿ ಆ ಕಂಬಗಳು ಬೀಳಲಿನಿಂದ ಮಾಡಿರುವವು. ಇವುಗಳ ಆಧಾರಕ್ಕೆ ಕಂಬದಿಂದ ಕಂಬದ ನಡುವೆ ತುಂಬ ಸೊಪ್ಪು, ಸಲಿಕೆಗಳ ಬೇಲಿಯನ್ನು ಕಟ್ಟಿರುತ್ತಾರೆ. ಹೊರ ಮೈಯಿಗೆ ಮಣ್ಣಿನ ದಂಡೆ ಹಾಕಿ, ಒಳಗಡೆ ನೀರನ್ನು ತುಂಬಿಸಿದರೆ, ನೂರು ಎಕ್ಕರೆ ಜಮೀನುಗಳಿಗೆ ನೀರನ್ನು ಹಾಯಿಸಬಹುದಿತ್ತು. ಮಾವನಿಗೆ ಹತ್ತು ಎಕರೆಯನ್ನಾದರು ಕಬ್ಬನ್ನು ಬೆಳೆಸಬೇಕೆಂಬ ಹಂಬಲ ಇತ್ತು ಆದರೆ ಕಾಡಾನೆಗಳು ಆತನ ಕನಸ್ಸನ್ನು ಭಗ್ನಗೊಳಿಸಿದವು.

ನಾರಾಯಣನು ಶಿವರಾಮಯ್ಯನವರೊಂದಿಗೆ ಚರ್ಚಿಸುತ್ತ ತನ್ನ ಮನದ ಆಸೆಯೊಂದನ್ನು ವ್ಯಕ್ತಪಡಿಸುತ್ತಾನೆ. ಮತ್ತು ಅದರ ವೈಚಿತ್ರವನ್ನು ಅದ್ಭುತವಾಗಿ ಕಟ್ಟಿಕೊಟ್ಟಿದ್ದಾರೆ. ನಿಸರ್ಗದಲ್ಲಿ ಆತಂಕವಿರುವುದರ ಜೊತೆಗೆ ಬದುಕಿನ ಉತ್ಸಾಹವೂ ಕೂಡ ಮಡುಗಟ್ಟಿರುತ್ತದೆ. ಸುಖ ಸಂತೋಷವನ್ನು ಪಡೆಯಲು ಮನುಷ್ಯ ನಿರಂತರ ಹೋರಾಟ ಮಾಡುತ್ತಿರುತ್ತಾನೆ. ಅದೇ ಅವನ ಬದುಕಿನ ಸರಿಯಾದ ನೆಲೆಯೂ ಕೂಡ ಆಗಿದೆ. ಈ ನೆಲೆಯಲ್ಲಿ ಅವನ ಹೋರಾಟ ಮತ್ತು ಅಸ್ತಿತ್ವದ ಪ್ರಶ್ನೆ ಅಡಗಿದೆ. ಗೋಪಾಲಯ್ಯ ಹೋರಾಡುತ್ತಲೇ ತನ್ನ ಬದುಕನ್ನು ಕಟ್ಟಿಕೊಳ್ಳುವುದು. ಆತನ ದಿಟ್ಟತನದ ಪ್ರತೀಕವಾಗಿದೆ. ಗೋಪಾಲಯ್ಯನ ದಿಟ್ಟತನದ ಅನುಭವವನ್ನು ಕಂಡು ಶಿರಾಮಯ್ಯ ಆಶ್ಚರ್ಯಚಕಿತರಾಗುತ್ತಾರೆ. ಅವನ ಅನುಭವ ಹೊರಗಿನ ನೋಡುಗರಿಗೆ ಕುತೂಹಲವಾಗಿರಬಹುದು. ಆದರೆ ಅದು ಅನಿವಾರ್ಯವಾಗಿದೆ. ಅನಿವಾರ್ಯತೆಯು ಅವನನ್ನು ಮುನ್ನಡೆಸುತ್ತದೆ. ಕಾಡನ್ನು ಕಡಿದು ನಾಡನ್ನಾಗಿಸಿಕೊಂಡು ಗೋಪಾಲಯ್ಯ ಬದುಕನ್ನು ಕಟ್ಟಿಕೊಳ್ಳುತ್ತಿದ್ದಾನೆ. ಇದು ಮಾನವನ ಜೈವಿಕ ಪ್ರಕ್ರಿಯೆಯ ನೆಲೆಯೂ ಆಗಿದೆ.

ಗೋಪಾಲಯ್ಯ ಜೀವಿಸುತ್ತಿರುವ ಸ್ಥಳವು ನಿಸರ್ಗಮಯವಾಗಿದೆ. ಅಡಿಕೆ ತೋಟದ ಆಸರೆಯನ್ನು ಪಡೆದುಕೊಂಡಿದ್ದ ತೋಟದ ನಡುವೆ ಬಚ್ಚಲ ಮನೆ ಬಳಿಯಲ್ಲೆ ಗುಳುಗುಳು ಶಬ್ದ ಮಾಡಿ ಹರಿಯುವ ದಂಬೆ ನೀರು, ಬಚ್ಚಲು ಮನೆಯಲ್ಲಿ ಬೆಂಕಿ ಒಟ್ಟುತ್ತ ಒಬ್ಬರು ಮುದುಕರು ಕುಳಿತಿದ್ದರು. ಇಂತಹ ಕಟ್ಟು ಮಸ್ತಾದ ಜಾಗದಲ್ಲಿ ಗೋಪಾಲಯ್ಯ ಕಾಡನ್ನು ಸವರಿ ಮನೆಮಾಡಿಕೊಂಡು ವಾಸವಾಗಿದ್ದನು. ಇದರೊಂದಿಗೆ ವ್ಯವಸಾಯ ಮಾಡಲು ಭೂಮಿಯನ್ನು ಮಾಡಿಕೊಂಡಿದ್ದನು. ಇವನ ಸಾಹಸವನ್ನು ಕಂಡು ಶಿವರಾಮಯ್ಯನಿಗೆ

ಆಶ್ಚರ್ಯವಾಗಿತ್ತು. ಬೆಟ್ಟ ಗುಡ್ಡಗಳಲ್ಲಿ ಒಕ್ಕಲು ಮನೆಗಳು ಹರಿದಾರಿಗೊಂದು ಇದೆಯೋ ಇಲ್ಲವೋ ಕಾಡು ಪ್ರಾಣಿಗಳ ಭಯವಂತೂ ಇದ್ದೆ ಇರುತ್ತದೆ. ಇವೆಲ್ಲವುಗಳ ಮದ್ಯದಲ್ಲಿ ಕಾಡಿನಲ್ಲಿರುವ ಜೀವ ಜಂತುಗಳ ಮತ್ತು ಪರಿಸರದೊಂದಿಗೆ ಹೊಂದಿಕೊಂಡು ಹೋಗುತ್ತಿರುತ್ತಾನೆ.

ಗೋಪಾಲಯ್ಯನು ವಾಸಿಸುವ ಸ್ಥಳದಲ್ಲಿ ದೇರಣ್ಣಗೌಡನ ಮತ್ತು ಗೋಪಾಲಯ್ಯನ ಹಸುಗಳಿಗೆ ಆಗಾಗ ಹುಲಿಗಳ ಕಾಟ ತಪ್ಪಿದ್ದಲ್ಲ. ಒಮ್ಮೊಮ್ಮೆ ಮನುಷ್ಯರ ಮೇಲೆ ಕೂಡ ದಾಳಿ ಮಾಡುತ್ತಿರುತ್ತವೆ. ಇವುಗಳೆಲ್ಲದರ ಮದ್ಯದಲ್ಲಿ ದೇರಣ್ಣಗೌಡ ಮತ್ತು ಗೋಪಾಲಯ್ಯನ ಜೀವನ ನಿಸರ್ಗದ ನೆಲೆಯಲ್ಲಿ ಸಾಗುತ್ತಿರುವುದನ್ನು ಕಾಣಬಹುದು. ಗೋಪಾಲಯ್ಯ ತಾನು ಸಾಗುವಳಿ ಮಾಡಿರುವ ತೋಟದ ಹೊಲಕ್ಕೆ ಹಾಗೂ ಕಾಡಿನ ಇನ್ನೊಂದು ಕಾಟು ಮೂಲೆಯಲ್ಲಿರುವ ನಾರಾಯಣನ ತೋಟಕ್ಕೆ ಕಾಡಾನೆಗಳು ಆಗಾಗ ದಾಳಿ ಮಾಡುವುದುಂಟು, ಇದರೊಂದಿಗೆ ಕಾಟಿಗಳ ದಾಳಿಯು ಕೂಡಿದೆ. ಅದನ್ನು ಕುರಿತು ಗೋಪಾಲಯ್ಯ "ಅದೊಂದರದ್ದೇ ಅಂದರೇನು? ಆನೆಗಳ ಲೂಟಿ ಕಡಿಮೆ ಇದೆಯೇ? ಆನೆಯ ಹಿಂಡು ಬಂದು ನುಗ್ಗಿದರೆ, ಅಡಿಕೆ ತೋಟ ಒಂದು ರಾತ್ರಿಯಲ್ಲಿಯೇ ನೆಲಸಮ' ಇತ್ತೀಚಿಗೆ ಕಾಟು ಮೂಲೆಗೆ ಆನೆ ಬಂದಿತ್ತು ಎಂದನಲ್ಲ ನಾರಾಯಣ ದೇವರು ಮಾಡುವ ಅನ್ಯಾಯ ಎಂದರೆ ಇದು! ಅವಕ್ಕೆ ಕಾಡು ಗುಡ್ಡೆಯಲ್ಲಿ ಸೊಪ್ಪಿಗೆ ಬರಗಾಲವೇ? ಹುಲ್ಲು ತಿಂಡಿ, ನೀರುಗಳಿಗೆ ಕೊರತೆಯೇ ನೆಟ್ಟು ಬೆಳಸಿದ ತೋಟಕ್ಕೆ ನುಗ್ಗಿ, ಅದನ್ನು ಮುರಿಯಬೇಕೆಂದೇನು?" ನಿಸರ್ಗ ಮದ್ಯದ ವ್ಯವಸಾಯದ ಬಗೆಯನ್ನು ಕುರಿತು ಗೋಪಾಲಯ್ಯನು ಶಿವರಾಮಯ್ಯನವರಿಗೆ ಪರಿಚಯಿಸುತ್ತಾನೆ. "ಬೆಟ್ಟದ ಜೀವ ಪ್ರಾದೇಶಿಕ ಚಿತ್ರ"[7] ಸರ್ವಸಾಮಾನ್ಯವಾಗಿ ಊರಿನ ಕೂಡು ಕುಟುಂಬಗಳ ವ್ಯವಸಾಯಕ್ಕೂ, ನಿಸರ್ಗದ ಮದ್ಯೆ ಏಕಾಂಗಿಯಾಗಿ ವ್ಯವಸಾಯ ಮಾಡುವ ಜೀವನಕ್ಕೂ ಬಹಳ ವ್ಯತ್ಯಾಸವನ್ನು ಕಾಣಬಹುದು. ನಿಸರ್ಗದಲ್ಲಿ ಕಾಡಿನ ಪ್ರಾಣಿಗಳಾದ ಹುಲಿ, ಸಿಂಹ, ಚಿರತೆ ಮುಂತಾದವುಗಳ ಭಯ ಇದ್ದೆ ಇರುತ್ತದೆ. ಇದರ ಮಧ್ಯದಲ್ಲಿ ಗೋಪಾಲಯ್ಯ ಬೆಟ್ಟದ ತುದಿಯಲ್ಲಿ ಹುಟ್ಟಿ, ನಿಸರ್ಗದೊಂದಿಗೆ ಬೆಟ್ಟದಂತಹ ಜೀವನ ನಡೆಸುವ ಬಗೆಯನ್ನು ಕಾಣಬಹುದು. ಅಲ್ಲದೇ ಒಮ್ಮೊಮ್ಮೆ ಗೋಪಾಲಯ್ಯ ಮತ್ತು ನಾರಾಯಣನಂತಹ ಜಮೀನ್ದಾರರಿಗೆ ನಷ್ಟವು ಕೂಡ ಆಗುವುದುಂಟು.

ಮನುಷ್ಯನಿಗೆ ಮೂಲಭೂತವಾಗಿ ಅವಶ್ಯಕವಾಗಿರುವುದು ಉಸಿರಾಡಲು ಪರಿಶುದ್ಧಗಾಳಿ, ಶುದ್ಧ ನೀರು, ಪೋಷಣೆ ಮಾಡುವ ಪ್ರಾಣಿ ಸಂಕುಲಕ್ಕೆ ಬೇಕಾದ ಹಸಿರು ಹುಲ್ಲು, ಬದುಕಲು ಫಲವತ್ತಾದ ಭೂಮಿ ಇದ್ದರೆ ಮಾನವನಿಗೆ ಯಾವುದೇ ತೊಂದರೆಯಿಲ್ಲ. ಇದೆಲ್ಲವನ್ನು ನಿಸರ್ಗವು ಮಾನವನಿಗೆ ಕೊಟ್ಟಿರುವ ಬಳುವಳಿಯಾಗಿದೆ. ಮಾನವ ಕೆಲವೊಮ್ಮೆ ತನ್ನ ದುರಾಸೆಗೆ ಸಿಲುಕಿ ನಿಸರ್ಗವನ್ನು ದೋಚಲು ಪ್ರಯತ್ನಿಸುತ್ತಾನೆ. ಆಗ ತನ್ನ ಅಸ್ತಿತ್ವವನ್ನು ಪರಿಸರದಲ್ಲಿ ಜೈವಿಕವಾಗಿ ಕಳೆದುಕೊಳ್ಳುತ್ತಾನೆ.

ಜೈವಿಕ ನೆಲೆಯಲ್ಲಿ ಮನುಷ್ಯನಿಗೆ ಕೆರೆ, ಜಲಪಾತ, ನದಿ, ಜರಿ ಇನ್ನೂ ಮುಂತಾದವುಗಳು ಅವನನ್ನು ಉಲ್ಲಾಸಗೊಳಿಸುತ್ತಿವೆ. ಈ ಉತ್ಸಾಹದಿಂದ ಅವನು ಸುಖದ ಜೀವನವನ್ನು ನಡೆಸುತ್ತಾನೆ. ಅದೇ ರೀತಿ ಗೋಪಾಲಯ್ಯನು ನಾರಾಯಣನನ್ನು ಕಾಟು ಮೂಲೆಯಲ್ಲಿ ವಾಸಿಸುವುದಕ್ಕೆ ಸಂಬಂಧಿಸಿದಂತೆ ಶಿವರಾಮಯ್ಯನಿಗೆ ಹೇಳುತ್ತಾ. "ನನಗೆ ಅವರು ಏನಾಗುವುದು ಬೇಡ, ನನಗೆ ಸಮೀಪವೂ ಅಲ್ಲ ಯಾವ ಸಂಬಂಧವೂ ಅಲ್ಲ, ಅಪ್ಪ ಅಮ್ಮ, ಅಜ್ಜಿ ಇಲ್ಲದಂತಹ ನಾನು, ಹುಡುಗನಿರುವಾಗಲೇ ಹೊಳೆಯಲ್ಲಿ ತೇಲುವ ಕಟ್ಟಿಗೆ ಬಳಿದು ದಂಡೆಯನ್ನು ಸೇರುವಂತೆ ಅವರನ್ನು ಬಂದು ಸೇರಿದೆ. ಅವರಿಂದಲೇ ಈಗ ಹೀಗಿದ್ದೇನೆ. ದುಡಿಯಲು ನೆಲೆ ತೋರಿಸಿದರು. ಇರಲು ಮನೆಯನ್ನು ಕೊಟ್ಟರು ಅವರು ಮದುವೆಯನ್ನು ಮಾಡಿಸಿದರು." ನಾರಾಯಣನು ಜೀವಿಸುವ ತವಕ ಮತ್ತು ಅವನ ತವಕವನ್ನು ಈಡೇರಿಸಲು ಗೋಪಾಲಯ್ಯನು ಆಸರೆಯಾಗಿ ಭೂಮಿಯನ್ನು ಸಾಗುವಳಿ ಮಾಡಿ ಜೀವನ ನಡೆಸುವುದು ಇದರೊಂದಿಗೆ ಅವನು ನಿಸರ್ಗದ ನೆಲೆಯೊಂದಿಗೆ ಹೊಂದಿಕೊಂಡಿರುವ ನಂಟು ಜೈವಿಕ ಸಂಬಂಧವಾಗಿ ಮೂಡಿ ಬಂದಿದೆ. ನಾರಾಯಣಯ್ಯ, ಲಕ್ಷ್ಮೀ, ಗೋಪಾಲಯ್ಯ, ಶಂಕರಿ, ದೇರಣ್ಣಗೌಡ, ಭಟ್ಯ ಮುಂತಾದ ಪಾತ್ರಗಳು ನಿಸರ್ಗದ ನೆಲೆಯಲ್ಲಿ ಬದುಕನ್ನು ಕಟ್ಟಿಕೊಂಡು ಜೀವನ ಸಾಗಿಸುವರು. ಅಲ್ಲದೆ ಕೃಷಿ, ಬೇಟೆ, ಸಂಸಾರ ನಡೆಸುವುದು, ದಟ್ಟವಾದ ಬೆಟ್ಟ ಗುಡ್ಡಗಳ ಪರ್ವತಗಳ ನಡುವೆ ಅವರು ತಮ್ಮ ಸಂಸ್ಕೃತಿಯನ್ನು ಬೆಳೆಸಿಕೊಂಡಿರುವುದನ್ನು ನೋಡಬಹುದು.

ಕಾರಂತರು ತಮ್ಮ ಕಾದಂಬರಿಗಳಲ್ಲಿ ಪ್ರಮುಖವಾಗಿ ನಿಸರ್ಗವನ್ನು ಪ್ರತಿನಿಧಿಸಿರುವುದನ್ನು ಕಾಣಬಹುದು. ನಿಸರ್ಗದ ನೆಲೆಯಲ್ಲಿ ವೈವಿಧ್ಯಮಯವಾದ ಸನ್ನಿವೇಶಗಳನ್ನು ತರುತ್ತಾರೆ. ದಕ್ಷಿಣ ಕನ್ನಡದ ಜನ ಜೀವನಕ್ಕೆ ಸಂಬಂಧಿಸಿದಂತೆ ನಿಸರ್ಗದ ಮದ್ಯದಲ್ಲಿ ವಾಸಿಸುವ ಜನರ ಮಾನವೀಯ ಸಂಬಂಧಗಳ ನೆಲೆಯನ್ನು ಇವರ ಕಾದಂಬರಿಗಳಲ್ಲಿ ಕಾಣಬಹುದು. ಮಾನವೀಯ ನೆಲೆಗಳೆಂದರೆ ಮನುಷ್ಯ ವಿವಿಧ ರೀತಿಯ ಸಂಬಂಧವನ್ನು ಹೊಂದಿರಬಹುದು. ಮನುಷ್ಯನು ನಿಸರ್ಗದ ಭಾಗವಾದ ಭೂಮಿ, ಬೆಟ್ಟ, ಗುಡ್ಡ, ಪರ್ವತ, ನದಿ, ಕಡಲು, ಕಾಡು, ಸೂರ್ಯನ ಬೆಳಕು ಮುಂತಾದ ಸಂಗತಿಗಳ ಮದ್ಯ ತನ್ನ ಬದುಕನ್ನು ಕಟ್ಟಿಕೊಂಡು ಜೀವಿಸುವುದು ಬಹು ಮುಖ್ಯವಾಗಿದೆ. ಈ ಕಾದಂಬರಿಯಲ್ಲಿ ನಿಸರ್ಗವು ಮುಖ್ಯವಾಗಿದ್ದು, ಮನುಷ್ಯನ ಜೀವನವನ್ನು ನಡೆಸುವುದರ ಬಗೆಯನ್ನು ಹೇಳುತ್ತದೆ. ಇಲ್ಲಿ ಬರುವ ಪಾತ್ರಗಳು ನಿಸರ್ಗದೊಂದಿಗೆ ಸಂಘರ್ಷ ನಡೆಸುವ ಮೂಲಕ ಮಾನವೀಯ ಮೌಲ್ಯಗಳನ್ನು ರೂಪಿಸಿಕೊಂಡಿರುವುದು ಬಹುಮುಖ್ಯವಾಗಿದೆ. ಇಲ್ಲಿ ಕಾರಂತರೇ ನಿರೂಪಕರಾಗಿ ಕಂಡುಬಂದಿರುವುದನ್ನು ಗಮನಿಸುವುದು. ಕಾದಂಬರಿಯ ಮುಖ್ಯ ಪಾತ್ರಗಳಾದ ಗೋಪಾಲಯ್ಯ ಶಂಕರಮ್ಮ, ದೇರಣ್ಣಗೌಡ ಮತ್ತು ನಾರಾಯಣಯ್ಯ, ಭಟ್ಯ ಇವರೆಲ್ಲರು ಬೆಟ್ಟ ಗುಡ್ಡಗಳಂತಹ ಕಾಡಿನ ಮದ್ಯದಲ್ಲಿ ಅಸ್ತಿತ್ವವನ್ನು ಪಡೆದುಕೊಂಡು ಬದುಕನ್ನು ಕಟ್ಟಿಕೊಳ್ಳುತ್ತಿರುವರು. ಇಂತಹ ನಿಸರ್ಗದ ಜೊತೆಗೆ ಹೊಂದಿರುವ ಮಾನವೀಯ ಸಂಬಂಧಗಳು ಪ್ರಮುಖವಾಗಿವೆ. ಕಾರಂತರೆ ಕಾದಂಬರಿಯನ್ನು ಕುರಿತು 'ಬಾಳು ನನಗೆ ಮುಖ್ಯ, ಬಾಳನ್ನು ತಿಳಿಯ ಬೇಕಾದ ಸಾಧನಗಳೂ ಅಷ್ಟೆ ಮುಖ್ಯ' ಎನ್ನುವ ಸಂದೇಶವನ್ನು ನೀಡುತ್ತಾರೆ.

ಗೋಪಾಲಯ್ಯನು ನಿಸರ್ಗ ಮದ್ಯದಲ್ಲಿ ಹೋರಾಡಿ ಜೀವನವನ್ನು ಕಟ್ಟಿಕೊಂಡಿರುತ್ತಾನೆ. ಇಲ್ಲಿಗೆ ಶಿವರಾಮಯ್ಯ ಆಕಸ್ಮಿಕವಾಗಿ ಬೇಟಿಕೊಡುತ್ತಾನೆ. ಅಂತಹ ಸಂದರ್ಭದಲ್ಲಿ ಗೋಪಾಲಯ್ಯನು ಶಿವರಾಮಯ್ಯನಿಗೆ ಇಡೀ ನೈಸರ್ಗಿಕ ಜೀವನದ ಪ್ರಪಂಚವನ್ನು ಪರಿಚಯಿಸುತ್ತಾನೆ.

ತಮ್ಮ ಮನೆಗೆ ಬಂದ ಅಥಿತಿಗಳನ್ನು ಪ್ರೀತಿಯಿಂದ ಸತ್ಕರಿಸಿದ್ದು ಮಾನವೀಯ ನೆಲೆಗಳು ನಮಗೆ ತೋರುತ್ತವೆ. ಗೋಪಾಲಯ್ಯನಿಂದ ಕಾಟುಮೂಲೆಯ ವಿಷಯವನ್ನು ತಿಳಿದ ಶಿವರಾಮಯ್ಯನು ಅದನ್ನು ಕುರಿತು ಕೇಳುತ್ತಾನೆ. ಆಗ ಗೋಪಾಲಯ್ಯನು "ಅದು ನಮ್ಮದೇ ಒಂದು ಜಾಗ. ಆದರೆ ನೋಡಿ ಈ ಇಡೀ ವಠಾರದಲ್ಲಿ ಬೇರೊಂದು ಬ್ರಾಹ್ಮಣರ ಮನೆಯಿಲ್ಲ. ಹಾಗಾಗಿ ನಾನೇ ನಮ್ಮವರ ಒಬ್ಬ ಹುಡುನನ್ನು ಅಲ್ಲಿ ತೋಟದಲ್ಲಿ ತಂದು ಸ್ಥಾಪನೆ ಮಾಡಿ ಬಿಟ್ಟಿದ್ದೇನೆ. ಅಲ್ಲಿ ನನಗೆ ಏಳೆಂಟು ಖಂಡಿ ಅಡಿಕೆಯಾಗುವಷ್ಟು ದೊಡ್ಡ ತೋಟವಿದೆ. ನಮ್ಮ ಕಾಟುಮೂಲೆಯೆಂದರೆ ಇಲ್ಲಿಗೆ ಸಮೀಪ, ಏನು ಒಂದು ಗಳಿಗೆಯ ದಾರಿಯೂ ಇಲ್ಲ. ನಾನೇ ಕಲ್ಪಿಸಿ ಇಡಿಸಿ ನೆಟ್ಟು ಮಾಡಿದಂಥ ತೋಟವದು. ನಾರಾಯಣ ನಮ್ಮದೇ ಜಾತಿಯವ ಅಷ್ಟೆ ಪಾಪ ಎಲ್ಲೂ ಗತಿ ಗೋಮೂತ್ರವಿಲ್ಲದೆ ಅಲೆಯುತ್ತಿದ್ದ ಮೊದಲಿಗೆ. ನಾನೇ ಅವನನ್ನು ಕರೆತಂದು ಅವನಿಗೊಂದು ಲಗ್ನ ಮಾಡಿಸಿದೆ. ಅಲ್ಲಿನ ಮನೆಯಲ್ಲಿದ್ದು ತೋಟ ನೋಡಿಕೊಂಡಿರು ಎಂದು ಬಿಟ್ಟೆ ಹತ್ತಿರವಿರಲಿ ಎಂದು ಹಾಗೆ ಮಾಡಬೇಕಾಯಿತು". ಎನ್ನುತ್ತಾರೆ. ಗೋಪಾಲಯ್ಯ ನಿಸರ್ಗದ ಕೂಸಾಗಿ, ನಿಸರ್ಗದಲ್ಲಿಯೇ ತನ್ನ ಅಸ್ತಿತ್ವವನ್ನು ಹುಟ್ಟಿನಿಂದ ಸಾಯುವವರೆಗೂ ಜೀವನವನ್ನು ನಡೆಸಲು ಇಚ್ಚೆಯುಳ್ಳವನು. ವಿಶಾಲ ಹೃದಯದ ವ್ಯಕ್ತಿತ್ವ ಗೋಪಾಲಯ್ಯನದು. ದಿಕ್ಕು ದೆಸೆಯಿಲ್ಲದ ನಾರಾಯಣನಿಗೆ ನಿಸರ್ಗದ ನೆಲೆಯಲ್ಲಿ ಆಶ್ರಯವನ್ನು ಒದಗಿಸಿಕೊಟ್ಟಿರುವುದು ಮಾನವೀಯತೆ ನೆಲೆಗೆ ಹಿಡಿದ ಕನ್ನಡಿಯಾಗಿದೆ. ಶಿವರಾಮಯ್ಯ ಗೋಪಾಲಯ್ಯ ಮತ್ತು ಶಂಕರಮ್ಮ ದಂಪತಿಗಳ ಮಗನಾದ 'ಶಂಭು' ಮುಂಬೈಗೆ ವಿದ್ಯಾಭ್ಯಾಸ ಮಾಡಲು ಹೋಗಿ ಹಿಂತಿರುಗಿ ಬಾರದೇ ಹೋಗಿರುವ ವಿಷಯವನ್ನು ಅವರಿಂದಲೇ ತಿಳಿಯುತ್ತಾನೆ. ಶಿವರಾಮಯ್ಯ ನಗರ ಜೀವನದ ಪ್ರತೀಕವಾಗಿದ್ದರೂ ಆ ನಿಸರ್ಗ, ಕಾಡು ಜೀವನದ ಸುಖ ದುಃಖದೊಂದಿಗೆ ಸಮಪಾಲು ಹಂಚಿಕೊಳ್ಳುವ ಸನ್ನಿವೇಶದಲ್ಲಿ ಶಿವರಾಮಯ್ಯನ ಮಾನವೀಯತೆ ತಿಳಿಯುತ್ತದೆ. ಒಂದು ಸಂದರ್ಭದಲ್ಲಿ ಶಿವಾರಮಯ್ಯ ಗೋಪಾಲಯ್ಯನವರನ್ನು ಭಟ್ಟರೇ ಈ ಮೂಲೆಯಲ್ಲಿ ನೀವು ನಿಮ್ಮ ಹಿರಿಯರು ಇಷ್ಟೆಲ್ಲಾ ನೆಲವನ್ನು ಬೆಟ್ಟಗುಡ್ಡಗಳಿಂದ ಕೂಡಿದ ಕಲ್ಲು ಮುಳ್ಳುಗಳಿಂದ ಹಸನುಗೊಳಿಸಿ, ಬೆವರು, ರಕ್ತವನ್ನು ಸುರಿಸಿ ನಂದನವನದಂತೆ ಮಾಡಿದ ಈ ಆಸ್ತಿ ಯಾರ ಪಾಲಿಗೆ ಸೇರಬೇಕು? ಯಾರಿಗಾಗಿ ಈ ಆಸ್ತಿಯನ್ನು ಮಾಡಿದಿರಂತೆ? ಎಂದಾಗ ಶಂಭುವನ್ನು ನೆನಪಿಸಿಕೊಳ್ಳುತ್ತಾ ತಾನು ಪುಣೆಯಲ್ಲಿ ಕಂಡ ಎಸ್.ಕೆ.ಶರ್ಮರ ವಿಚಾರ ಹೇಳಿ ಗೋಪಾಲಯ್ಯ ಮತ್ತು ಶಂಕರಮ್ಮ ದಂಪತಿಗಳಿಗೆ ಸಮಾಧಾನಪಡಿಸುತ್ತಾರೆ. ಈ ಮೂಲಕ ಶಂಭುವಿನ ಸುಳಿವು ನೀಡಿ, ಆಮೇಲೆ ಗೋಪಾಲಯ್ಯನನ್ನು ಶಿವರಾಮಯ್ಯ ಮಗನನ್ನು ಹುಡುಕಲು ಪುಣೆಗೆ ಕರೆಸುತ್ತಾರೆ. ಇಲ್ಲಿ ಶಿವರಾಮಯ್ಯ ಆಧುನಿಕ ವ್ಯಕ್ತಿಯಾಗಿ ಹಳ್ಳಿಯ ಸೊಗಡಿನ ನಿಸರ್ಗದ ಸೊಬಗಿನಲ್ಲಿ ಅನುಭವ ಪಡೆದು ಅಲ್ಲಿನ ಪಾತ್ರಗಳೊಂದಿಗೆ ಕೂಡಿಕೊಂಡು ಅವರು ಕಷ್ಟ ಸುಖ ದುಃಖ ನೋವು ನಲಿವುಗಳೊಂದಿಗೆ ಬೆರೆತು ತನ್ನ ಮಾನವೀಯ ನೆಲೆಯನ್ನು ಪ್ರಸ್ತುತ ಪಡಿಸುವುದು ಕಾದಂಬರಿಯಲ್ಲಿ ಪ್ರಮುಖವಾಗಿದೆ.

ಕಾರಂತರು ತಮ್ಮ ಕಾದಂಬರಿಗಳ ಮೂಲಕ ಮಾನವ ಸಂಸ್ಕೃತಿಯನ್ನು ವ್ಯಕ್ತಪಡಿಸಿರುವುದನ್ನು ಕಾಣಬಹುದು. ಸಾಮಾನ್ಯ ಅರ್ಥದಲ್ಲಿ ಸಂಸ್ಕೃತಿ ಎಂದರೆ ಮಾನವನ ಆಚಾರ, ವಿಚಾರ, ನಡೆ, ನುಡಿ ಎನ್ನಲಾಗುತ್ತಿದೆ. ಆಚಾರ ವಿಚಾರಗಳು ಸಾಮಾನ್ಯವಾಗಿ ಮನುಷ್ಯನ ನಡುವಳಿಕೆಯಲ್ಲಿ ಅಡಕವಾಗಿರುತ್ತವೆ. ಅವನ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ನೆಲೆಗಳ ಮೇಲೆ ಕೂಡ ಪರಿಣಾಮ ಬೀರುತ್ತದೆ. ಇವುಗಳನ್ನು ಕಾರಂತರು ನಿಸರ್ಗದ ಜೊತೆಗೆ ಗುರುತಿಸಿ ಹೇಳಿರುವುದು ಬಹಳ ಪ್ರಮುಖವಾಗಿ ಗೋಚರವಾಗಿದೆ.

ಪ್ರಸ್ತುತ ಕಾದಂಬರಿಯಲ್ಲಿ ಬೆಟ್ಟವನ್ನೆ ಅಗೆದು, ಬೆಟ್ಟದಲ್ಲಿ ತನ್ನ ನೆಲೆಯನ್ನು ಕಟ್ಟಿಕೊಂಡು ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಂಡು ತೊಂದರೆಗಳಿಗೆ ಎದೆಗುಂದದೆ ಕಾಡಿನಲ್ಲಿ ವಾಸಿಸುವ ಗೋಪಾಲಯ್ಯನಂತಹ ಹಲವಾರು ಜನರ ಜೀವನವನ್ನು ಕುರಿತು ನಮಗೆ ಪ್ರಸ್ತುತಪಡಿಸುತ್ತದೆ. ಈ ಕಾದಂಬರಿಯನ್ನು ಕುರಿತು ಬಿ. ಮಾಲಿನಿಮಲ್ಯರವರು "ಮನುಷ್ಯ ಅನ್ನಕ್ಕಾಗಿ ನಿಸರ್ಗದೊಂದಿಗೆ ನಡೆಸಿದ ಹೋರಾಟದ ಕಥೆಯನ್ನು ಹೇಳುವ ಕಾದಂಬರಿ" ಎನ್ನುತ್ತಾರೆ. ಮನುಷ್ಯನ ಹಸುವಿನ ಇಂಗಿತವನ್ನು ವ್ಯಕ್ತಪಡಿಸುತ್ತ, ಮನುಷ್ಯನಿಗೆ ಆಹಾರವೇ ಮುಖ್ಯ ಹಾಗಾಗಿ ಅವನು ವ್ಯವಸಾಯ ಮಾಡುತ್ತಾನೆ. ಇದಕ್ಕಾಗಿ ಅವನು ಭೂಮಿಯನ್ನು 'ಉಳುಮೆ' ಮಾಡುತ್ತಾ ಇದರ ಮೂಲಕ ನಿಸರ್ಗದ ಜೊತೆಯಲ್ಲಿ ತನ್ನ ಸಂಸ್ಕೃತಿಯನ್ನು ಬೆಳೆಸಿಕೊಂಡು ಹೋಗುತ್ತಾನೆ.

ಶಿವರಾಮಯ್ಯ ಪಂಜಕ್ಕೆ ಹೋಗುವುದಕ್ಕೆ ದಾರಿ ತಪ್ಪಿ ಬೆಟ್ಟಗಳನ್ನು ಹಾಯ್ದು ಹೋಗುತ್ತಿದ್ದಾಗ ಹಿಂದುಗಡೆಯಿಂದ ಯಾರೋ ಬಂದಂತಾಗಿ ನೋಡುತ್ತಾರೆ. ಹಳ್ಳಿಯ ಗೌಡರಿಬ್ಬರು ಕಂಕುಳಲ್ಲಿ ಕೋಳಿಗಳೆರಡನ್ನು ಸಿಕ್ಕಿಸಿಕೊಂಡು ಹೋಗುವ ದೃಶ್ಯವನ್ನು ನೋಡುತ್ತಾರೆ. ಮತ್ತೊಬ್ಬನು ಕೈಯಲ್ಲಿ ರುಂಡಹೀನವಾದ ಬೇರೊಂದು ಹುಂಜವೂ ಕುಣಿಯುತ್ತಿದ್ದ ದೃಶ್ಯವನ್ನು ಆಲಿಸುತ್ತಾ ನಿಸರ್ಗದ ನೆಲೆಯಲ್ಲಿ ಶೂದ್ರಗೌಡರು ತಮ್ಮ ಸಂಸ್ಕೃತಿಯನ್ನು ಪರಿಚಯಿಸುವುದನ್ನು ಕಾಣಬಹುದು. ಅಲ್ಲಿನ ಜನರು ನಿಸರ್ಗದಲ್ಲಿ ವ್ಯವಸಾಯ ಮಾಡುತ್ತಾ ಬಿಡುವಿನ ವೇಳೆಯಲ್ಲಿ ಕೋಳಿ ಜೂಜಾಟದಂತಹ ಜಾನಪದ ಕ್ರೀಡೆಗಳನ್ನು ಆಡುವುದರ ಮೂಲಕ ಮನರಂಜನೆಯನ್ನು ಪಡೆಯುತ್ತಿದ್ದರು. ಶಿವರಾಮಯ್ಯ ಗೋಪಾಲಯ್ಯನ ಮನೆ ತಲುಪಿದಾಗ ಅವರಿಬ್ಬರು ನಿಸರ್ಗದ ಬದುಕಿನ ಅನುಭವಗಳನ್ನು ಚರ್ಚಿಸುತ್ತಾ ಕುಳಿತಾ, ಗೋಪಾಲಯ್ಯ ಕಾಡು ಪ್ರಾಣಿಗಳು ಆಗಾಗ ತೊಂದರೆ ಕೊಡುವುದರ ಬಗ್ಗೆ ತಿಳಿಸುತ್ತಾರೆ. ಆಗ ಶಿವರಾಮಯ್ಯ ಇಲ್ಲಿಗೇಕೆ ಬಂದಿರಿ? ಎಂದು ಕೇಳುತ್ತಾನೆ. ಆಗ ಗೋಪಾಲಯ್ಯನು ತಮ್ಮ ಪರಂಪರೆಯ ಹಿನ್ನೆಲೆಯನ್ನು ಹೇಳುತ್ತಾರೆ. ಅದು "ನನ್ನ ಅಜ್ಜನೋ, ಪಿಜ್ಜನೋ, ಹಾದಿ ತಪ್ಪಿಯೋ ಇತ್ತ ಬಂದಿರಬೇಕು, ನಮ್ಮ ಅಡಿಕೆ ತೋಟಕ್ಕೆ ಏನಾದರೂ ಇನ್ನೂರು ವರ್ಷಗಳಾದರೂ ಆಗಿರಬೇಕು." ಗೋಪಾಲಯ್ಯನು ತನ್ನ ಪೂರ್ವ ಪರಂಪರೆಯ ಹಿನ್ನೆಲೆಯನ್ನು ನೆನಪಿಸಿಕೊಳ್ಳುವುದನ್ನು ಕಾಣುತ್ತೇವೆ. ಪೂರ್ವಜರು ಯಾವುದೋ ಕೆಲಸದ ನಿಮಿತ್ತ ಇಲ್ಲಿಗೆ ಬಂದು ಬೀಡು ಬಿಟ್ಟು ತಮ್ಮ ಸಾಂಸ್ಕೃತಿಕ ಪರಂಪರೆಯನ್ನು ಮುಂದುವರೆಸಿಕೊಂಡು ಬಂದಿರುವುದನ್ನು ನೋಡಬಹುದು.

ಮನುಷ್ಯ ಪರಿಸರ ಪ್ರಿಯ. ಅವನು ಪರಿಸರದೊಂದಿಗೆ ನಿಕಟ ಸಂಬಂಧವನ್ನು ಹೊಂದಿದ್ದಾನೆ. ಅಲ್ಲದೆ ತಲತಲಾಂತರದಿಂದ ಪರಿಸರವನ್ನು ಆಧರಿಸಿ ಬದುಕುತ್ತಿದ್ದಾನೆ. ಮಾನವನು ಪರಿಸರದೊಂದಿಗಿನ ಸಂಬಂಧ ಸಂತಸಮಯವಾಗಿರಬೇಕು. ಆದರೆ ಅವನ ದುರಾಸೆ ಹೆಚ್ಚಿದಂತೆ ನಿಸರ್ಗದ ಮೇಲಿನ ಅಧಿಪತ್ಯ ಹೆಚ್ಚಾದಂತೆ ಸಮಸ್ಯೆ ತಲೆದೋರುತ್ತವೆ. ಹಾಗಾಗಿ ಭೂಮಿ ಮತ್ತು ಮಾನವ

ಹೊಂದಿರುವ ಸಂಬಂಧವನ್ನು ಸಾಮಾಜಿಕ ಸನ್ನಿವೇಶದಲ್ಲಿ ನಿದರ್ಶನವಾಗಿ ಪ್ರಭಾವಿಸಿರುವುದನ್ನು ಈ ಕಾದಂಬರಿಯಲ್ಲಿ ಗಮನಿಸಬಹುದು.

ನಿಸರ್ಗದ ಮತ್ತು ಜೀವನ ಸಂಕುಲದ ಸಂಬಂಧಗಳ ನಿದರ್ಶನ ಈ ಕಾದಂಬರಿಯಲ್ಲಿದೆ. ಮಾನವನ ಚಲನಶೀಲತೆ ನಿಸರ್ಗದಲ್ಲಿ ವಿವಿಧ ಬಗೆಯಲ್ಲಿ ರೂಪಗೊಂಡಿದೆ. ನಿರೂಪಕನಾದ ಶಿವರಾಮಯ್ಯನಿಗೆ ಅಲ್ಲಿನ ಜನರ ಬದುಕು, ಆಕಾಶ, ಕಾಡು ನೋಡಿ ಆಶ್ಚರ್ಯವನ್ನುಂಟು ಮಾಡುತ್ತದೆ. ಜನರ ಬದುಕು, ಸಂಘರ್ಷ, ರೋಗ ರುಜಿನಗಳು, ಅಲ್ಲಿನ ಕೂಲಿ ಆಳುಗಳ ಬದುಕಿನ ನರಕ, ಅಲ್ಲಿನ ಸೌಂದರ್ಯ, ನಿಗೂಢತೆ, ಬದುಕಿನಲ್ಲಿನ ಕ್ರೌರ್ಯ ಏಕಕಾಲಕ್ಕೆ ಚಿತ್ರಣಗೊಂಡಿರುವುದನ್ನು ಕಾಣಬಹುದು.

ಬೆಟ್ಟದ ಅಡಿಯಲ್ಲಿ ಬೆಟ್ಟವನ್ನು ಸವರಿ; ಬೆಟ್ಟಕ್ಕೆ ಎದೆಕೊಟ್ಟು ಬೆಟ್ಟದಂತೆ ಬದುಕಿದ ಗೋಪಾಲಯ್ಯನ ಪಾತ್ರ ಬಹು ಮುಖ್ಯವಾಗಿ ಕಂಡುಬಂದಿದೆ. ಕಾರಂತರು ಕಾದಂಬರಿಯ ಮೂಲಕ ಕಾಡು ಜೀವನದ ವಿವಿಧ ನೆಲೆಗಳನ್ನು ಗುರುತಿಸಿರುವುದನ್ನು ಗಮನಿಸಬಹುದು. ಕಾಡಿನಲ್ಲಿ ಸಾಂಸ್ಕೃತಿಕವಾಗಿ ಬೇಟೆ ಮತ್ತು ವ್ಯವಸಾಯನ್ನು ಪ್ರಮುಖವಾಗಿ ಗುರುತಿಸಿದ್ದಾರೆ. ಇದು ಅವರಿಗೆ ಅನಿವಾರ್ಯವು ಕೂಡ ಆಗಿತ್ತು. ಈ ಸನ್ನಿವೇಶವನ್ನು ಕುರಿತು ಜಿ. ಎಸ್. ಅಮೂರವರು "ಬೆಟ್ಟದ ಜೀವದಲ್ಲಿ ಕಾಡನ್ನೇ ನಾಡಾಗಿಸಿದ ಗೋಪಾಲಯ್ಯ ಶಂಕರಿ ಮೊದಲಾದ ಅಪೂರ್ವ ಪಾತ್ರಗಳ ಚಿತ್ರಣ ಅದ್ಭುತವಾಗಿದೆಯೆನ್ನುವ ಮಾತನ್ನಾಗಲಿ, ಅಲ್ಲಿ ವರ್ಣಿತವಾದ ದಕ್ಷಿಣ ಕನ್ನಡ ಜಿಲ್ಲೆಯ ಬೆಟ್ಟದ ಜೀವನದ ಹೋರಾಟದ ನಿರೂಪಣೆ ನಿರ್ಧಿಷ್ಟವಾಗಿದೆ ಎನ್ನುವುದನ್ನಾಗಲಿ, ಯಾರೂ ಅಲ್ಲಗಳೆಯಲಾರರು."[8] (ಟಿ.ಪಿ ಅಶೋಕ (ಸಂ) ಈ ಶತಮಾನದ ನೋಟ ಶಿವರಾಮ ಕಾರಂತ, ಪು.244) ಗೋಪಾಲಯ್ಯ–ಶಂಕರಿ ದಂಪತಿಗಳಿಬ್ಬರ ಬದುಕಿನ ಚಿತ್ರಣವನ್ನು ಕುರಿತು ಚಿತ್ರಿಸಿರುವುದನ್ನು ಗಮನಿಸಬಹುದು. ಮನುಷ್ಯನಿಗೆ ಬದುಕು ತುಂಬಾ ಮುಖ್ಯ. ಆ ಬದುಕು ಅನಾಗರಿಕತೆಯಿಂದ ಕೂಡಿರಬಾರದು, ಮಾನವೀಯತೆ ಮುಖ್ಯವುಳ್ಳ ನಾಗರಿಕತೆಯ ನೆಲೆಯಿಂದ ಕೂಡಿರಬೇಕು ಎಂಬುದನ್ನು ನಿಸರ್ಗದ ಜನರ ಬದುಕನ್ನು ಕುರಿತು ಈ ಮೇಲಿನಂತೆ ಹೇಳಿರುವುದನ್ನು ಕಾಣುತ್ತೇವೆ.

ಕಾರಂತರ ಕಾದಂಬರಿಗಳಲ್ಲಿ ನಿಸರ್ಗವು ಬಹಳ ವೈವಿದ್ಯಮಯವಾಗಿ ಕಾಣಿಸಿಕೊಂಡಿದೆ. ಮನುಷ್ಯನಿಗೆ ಪರಿಸರವು ಸೌಂದರ್ಯಾನುಭವವನ್ನು ನೀಡುವುದಲ್ಲದೆ, ಅವನ ಬದುಕಿನ ಸಂಗಾತಿಯಾಗಿ, ರಕ್ಷಕನಾಗಿ, ಹೋರಾಟದ ತುಣುಕಾಗಿ, ಸ್ಫೂರ್ತಿಯ ನೆಲೆಯಾಗಿ ಇನ್ನೂ ಹತ್ತು ಹಲವಾರು ರೀತಿಯಲ್ಲಿ ವ್ಯಕ್ತಗೊಂಡಿರುವುದನ್ನು ಅವರ 'ಬೆಟ್ಟದ ಜೀವ' ಕಾದಂಬರಿಯಂತಹ ಇನ್ನುಳಿದ ಕಾದಂಬರಿಯಲ್ಲಿಯು ಕೂಡ ಗಮನಿಸಬಹುದು.

**ಕೊನೆ ಟಿಪ್ಪಣಿ**

1. ಶಿವರಾಮ ಕಾರಾಂತ ಕೆ., 2019, ಬೆಟ್ಟದ ಜೀವ, ಪುಟ 13.
2. ಅದೇ, ಪುಟ 17.
3. ಅದೇ, ಪುಟ 26.
4. ಅದೇ, ಪುಟ 35.
5. ಅದೇ, ಪುಟ 46.
6. ಅದೇ, ಪುಟ 70.
7. ಅಶೋಕ ಟಿ. ಪಿ., (ಸಂ), 2021, ಕನ್ನಡ ಸಾಹಿತ್ಯ ಈ ಶತಮಾನದ ನೋಟ, ಶಿವರಾಮ ಕಾರಂತ, (ದ್ವಾರಕನಾಥ ಎಲ್., ಕಾರಂತರ ಪ್ರಪಂಚ, ಪುಟ 487).
8. ಅದೇ, ಪಟ 244.

**ಪರಾಮರ್ಶನ ಗ್ರಂಥಗಳು**


1. ಅನಂತಮೂರ್ತಿ ಯು. ಆರ್., 1992, ಪ್ರಜ್ಞೆ ಮತ್ತು ಪರಿಸರ, 2 ಭಾರತೀಯ ಸಂಸ್ಕೃತಿ ಮತ್ತು ಲೇಖನ, ಅಕ್ಷರ ಪ್ರಕಾಶನ, ಸಾಗರ.
2. ಅಶೋಕ ಟಿ. ಪಿ. (ಸಂ), 1993, ಈ ಶತಮಾನದ ನೋಟ ಶಿವರಾಮ ಕಾರಂತ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
3. ಕೃಷ್ಣಾನಂದ ಕಾಮತ್, 1992, ಸಸ್ಯ ಪ್ರಪಂಚ, ಬೆಂಗಳೂರು–41.
4. ನಾಗ ಐತಾಳ (ಸಂ), ಕಾರಂತ ಚಿಂತನ ಕಡಲಾಚೆಯ ಕನ್ನಡಿಗರಿಂದ, ಅಕ್ಷರ ಪ್ರಕಾಶನ, ಸಾಗರ.
5. ಶಿವರಾಮ ಕಾರಂತ, 2019, ಬೆಟ್ಟದ ಜೀವ, ಸಪ್ನ ಬುಕ್ ಹೌಸ್, ಬೆಂಗಳೂರು.
6. ಶಿವರುದ್ರಪ್ಪ ಜಿ. ಎಸ್., 1981, ಹೊಸಗನ್ನಡ ಸಾಹಿತ್ಯ ಎರಡು ಮಾರ್ಗಗಳು, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.